## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಮೈಸೂರು ತಾಲ್ಲೂಕಿನ ಕೂರ್ಗಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಹೂಟಗಳ್ಳಿ ಗ್ರಾಮಕ್ಕೆ ನೀರು ಸರಬರಾಜು ಮಾಡಿರುವಂತೆ ದಾಖಲೆಗಳನ್ನು ತಯಾರಿಸಿ ಅಕ್ರಮ ಎಸಗಿರುವ ಆರೋಪಗಳಿಗೆ ಸಂಬಂಧಿಸಿದಂತೆ ಮಾನ್ಯ ಉಪಲೋಕಾಯುಕ್ತರ ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ವರದಿ – ವಿವರವಾದ ಇಲಾಖಾ ವಿಚಾರಣೆಗಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ– ಆದೇಶ

ಓದಲಾಗಿದೆ :-1. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರ ಅ.ಸ.ಪತ್ರ ಸಂಖ್ಯೆ: Compt/Uplok/MYS/ 3734/2017/ DRE-4, ದಿನಾಂಕ. 07.11.2019

2. ಮಾನ್ಯ ಉಪಲೋಕಾಯುಕ್ತರವರ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ12(3) ರ ವರದಿ ಸಂಖ್ಯೆ: Compt/Uplok/ MYS/3734/ 2017/ DRE-4, ದಿನಾಂಕ. 04.11.2019

****

**ಪ್ರಸ್ತಾವನೆ :**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 09.07.2019ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮಾನ್ಯ ಉಪಲೋಕಾಯುಕ್ತರವರ ದಿನಾಂಕ : 25.06.2019ರ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪಲೋಕಾಯುಕ್ತರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಸದರಿ ವರದಿಗೆ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಶ್ರೀ ಸುಬ್ಬನಾಯ್ಕ ಬಿನ್ ಲೇಟ್ ಜವರಯ್ಯ, ತಲಕಾಡು ಗ್ರಾಮ, ಟಿ.ನರಸೀಪುರ ತಾಲ್ಲೂಕು ಇವರು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ದೂರಿನಲ್ಲಿ ತಲಕಾಡು ಪಂಚಲಿಂಗ ದರ್ಶನ ಮಹೋತ್ಸವ ಅಂಗವಾಗಿ 2013–14ನೇ ಸಾಲಿನಲ್ಲಿ ಸರ್ಕಾರವು ನೀಡಿರುವ ವಿಶೇಷ ಅನುದಾನದಲ್ಲಿ ಕೈಗೊಂಡಿರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸದೇ ಸುಳ್ಳು ಮಾಹಿತಿ ನೀಡಿ ಹಣ ದುರುಪಯೋಗ ಮಾಡಿಕೊಂಡಿರುವ ಶ್ರೀ ಆರ್.ಮಾದೇಶ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತಲಕಾಡು ಗ್ರಾಮ ಪಂಚಾಯತ್ ರವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಸದರಿ ದೂರಿನ ಬಗ್ಗೆ ಲೋಕಾಯುಕ್ತ ಕಚೇರಿಯು ಎದುರುದಾರರಿಂದ ಆಕ್ಷೇಪಣೆ ಕೇಳಲಾಗಿ 1ನೇ ಎದುರುದಾರರಾದ ಶ್ರೀ ಇಜಾಜ್ ಅಹಮ್ಮದ ಸಿದ್ದೀಕ್, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಮೈಸೂರು ಇವರು ದೂರಿನಲ್ಲಿನ ಅಂಶಗಳನ್ನು ಅಲ್ಲಗಳೆದು, ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮಗಳಿಗೆ ಕುಡಿಯವ ನೀರು ಸರಬರಾಜು ಮಾಡುವ ನಿರ್ಣಯವನ್ನು ತಾಲ್ಲೂಕು ಮಟ್ಟದ ಕುಡಿಯುವ ನೀರು ಟಾಸ್ಕ ಪೋರ್ಸ

ಸಮಿತಿಯ ಕೈಗೊಳ್ಳುವಂತೆ ತಿಳಿಸಿರುತ್ತದೆ. ನೀರು ಸರಬರಾಜು ಮಾಡುವ ಬಗ್ಗೆ ಯಾವುದೇ ಕಾರ್ಯಾದೇಶವನ್ನು ತಾವು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. 2 ರಿಂದ 4 ನೇ ಎದುರುದಾರರುಗಳು ಯಾವುದೇ ಆಕ್ಷೇಪಣೆ ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರು ಪ್ರಕರಣಕ್ಕೆ ಸಂಬಂಧಿಸಿದ ಕಡತ ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದು. ಈ ಕೆಳಕಂಡ ಆಪಾದಿತರುಗಳು ದಿನಾಂಕ:08.12.2016 ರಿಂದ 31.03.2017ರ ವರೆಗಿನ ಅವಧಿಯಲ್ಲಿ ಬೇರೆ ಬೇರೆ ಸಮಯಗಳಲ್ಲಿ ಹೊಟಗಳ್ಳಿ ಗ್ರಾಮಕ್ಕೆ ನೀರು ಸರಬರಾಜು ಮಾಡಿರುವ " ಕರ್ನಾಟಕ ಸರ್ಕಾರ, ಕೋರ್ಗಳ್ಳಿ ಗ್ರಾಮ ಪಂಚಾಯತ್ ಕಾರ್ಯಲಯ, ಕೋರ್ಗಳ್ಳಿ ಗ್ರಾಮ ಇಲವಾಲ ಹೋಬಳಿ ಮೈಸೂರು" ಎಂಬ ಮುದ್ರಿತ ಲೇಟರ್ ಹೆಡ್‌ನ ಪುಟ ಸಂಖ್ಯೆ: 1 ಮತ್ತು 12ಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪುಟಗಳಲ್ಲಿ ಟ್ರ್ಯಾಕ್ಟರ್/ಟ್ರೇಲರ್ ನೋಂದಣಿ ಸಂಖ್ಯೆ ಹಾಗೂ ದಾಖಲೆಗಳಲ್ಲಿ ದಿನಾಂಕಗಳು ನಮೂದಾಗದೇ ಇದ್ದರೂ ಸಹಿ ಮಾಡುವುದರ ಮೂಲಕ ದೂರುದಾರರಿಗೆ ಅನುಕೂಲವಾಗುವ ರೀತಿಯಲ್ಲಿ ದಾಖಲೆಗಳನ್ನು ತಯಾರಿಸುವ ಮೂಲಕ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳ ನಿಯಮ 3(1)ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡ ಬಂದ ಕಾರಣ, ನಿಯಮ 14(ಎ) ರನ್ವಯ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ತಮಗೆ ವಹಿಸುವಂತೆ ತಿಳಿಸಿರುತ್ತಾರೆ.

1) ಶ್ರೀ ಇಜಾಜ್ ಅಹಮ್ಮದ ಸಿದ್ದೀಕ್, ಸ.ಕಾ.ಇಂ. ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಮೈಸೂರು
2) ಶ್ರೀ ಕೆ.ಜಿ. ಮಹದೇವ ನಾಯಕ್, ಪಂಚಾಯತ ಅಭಿವೃದ್ಧಿ ಅಧಿಕಾರಿ, ಕೂರ್ಗಳ್ಳಿ ಗ್ರಾಮ ಪಂಚಾಯತ್
3) ಶ್ರೀ ಎಲ್.ಶಶಂಕಾ, ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ
4) ಶ್ರೀ ಎಂ.ಕುಮಾರ, ಗ್ರಾಮ ಲೆಕ್ಕಾಧಿಕಾರಿ, ಹಿನಕಲ್ ವೃತ್ತ ಗ್ರಾಮ

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ರವರು ಸಲ್ಲಿಸಿರುವ ವರದಿ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಮೈಸೂರು ತಾಲ್ಲೂಕಿನ ಇಲಗಲವಾಲ ಹೋಬಳಿ ಕೋರ್ಗಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಹೂಟಗಳ್ಳಿ ಗ್ರಾಮಕ್ಕೆ ದಿನಾಂಕ: 08.12.2016 ರಿಂದ 31.03.2017ರ ವರೆಗಿನ ಅವಧಿಯಲ್ಲಿ ಬೇರೆ ಬೇರೆ ಸಮಯಗಳಲ್ಲಿ ನೀರು ಸರಬರಾಜು ಮಾಡುವುದಕ್ಕೆ ಸಂಬಂಧಿಸಿದಂತೆ " ಕರ್ನಾಟಕ ಸರ್ಕಾರ, ಕೋರ್ಗಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯ, ಕೋರ್ಗಳ್ಳಿ ಗ್ರಾಮ ಇಲವಾಲ ಹೋಬಳಿ ಮೈಸೂರು" ಎಂಬ ಮುದ್ರಿತ ಲೇಟರ್ ಹೆಡ್‌ನ ಪುಟ ಸಂಖ್ಯೆ: 1 ಮತ್ತು 12ಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪುಟಗಳಲ್ಲಿ ಟ್ರ್ಯಾಕ್ಟರ್/ಟ್ರೇಲರ್ ನೋಂದಣಿ ಸಂಖ್ಯೆ ಹಾಗೂ ದಾಖಲೆಗಳಲ್ಲಿ ದಿನಾಂಕಗಳು ನಮೂದಾಗದೇ ಇದ್ದರೂ ಸಹಿ ಮಾಡುವುದರ ಮೂಲಕ ದೂರುದಾರರಿಗೆ ಅನುಕೂಲವಾಗುವ ರೀತಿಯಲ್ಲಿ ದಾಖಲೆಗಳನ್ನು ತಯಾರಿಸುವ ಮೂಲಕ ಗಂಭೀರ ಸ್ವರೂಪದ ಲೋಪಗಳಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಆದ್ದರಿಂದ ಸದರಿ ಲೋಪಗಳಿಗೆ ಕಾರಣರಾದ ಈ ಕೆಳಕಂಡ ಅಧಿಕಾರಿ / ನೌಕರರು ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಮನಸೋಇಚ್ಛೇ ಕಾರ್ಯನಿರ್ವಹಿಸುವ ಮೂಲಕ ಗಂಭೀರ ಸ್ವರೂಪದ ಕರ್ತವ್ಯಲೋಪವೆಸಗಿ, ನಿಯಮಗಳನ್ನು ಉಲ್ಲಂಘಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ

ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966ರ ನಿಯಮ 3(1) ನ್ನು ಉಲ್ಲಂಘಿಸಿರುತ್ತಾರೆ:-

1) ಶ್ರೀ ಇಜಾಜ್ ಅಹಮ್ಮದ ಸಿದ್ದೀಕ್, ಸ.ಕಾ.ಇಂ. ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಮೈಸೂರು
2) ಶ್ರೀ ಕೆ.ಜಿ. ಮಹದೇವ ನಾಯಕ್, ಪಂಚಾಯತ ಅಭಿವೃದ್ಧಿ ಅಧಿಕಾರಿ, ಕೂರ್ಗಳ್ಳಿ ಗ್ರಾಮ ಪಂಚಾಯತ್
3) ಶ್ರೀ ಎಲ್.ಶಶಂಕಾ, ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ
4) ಶ್ರೀ ಎಂ.ಕುಮಾರ, ಗ್ರಾಮ ಲೆಕ್ಕಾಧಿಕಾರಿ, ಹಿನಕಲ್ ವೃತ್ತ ಗ್ರಾಮ

ಮೇಲ್ಕಂಡ ಆಪಾದಿತರುಗಳ ಪೈಕಿ ಕ್ರಮ ಸಂಖ್ಯೆ (3) ಮತ್ತು (4) ರಲ್ಲಿನ ನೌಕರರು ಮೂಲತ: ಕಂದಾಯ ಇಲಾಖೆಗೆ ಸೇರಿದ ನೌಕರರಾಗಿದ್ದು.30.12.2019ರಂದು ಸದರಿಯವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕ್ರಮ ವಹಿಸುವ ಬಗ್ಗೆ ದಿನಾಂಕ: 2019ಕಂದಾಯ ಇಲಾಖೆಗೆ ಕಳುಹಿಸಲಾಗಿರುತ್ತದೆ. ಉಳಿದಂತೆ ಕ್ರಮ ಸಂಖ್ಯೆ: 1 ಮತ್ತು 2 ರಲ್ಲಿನ ಆಪಾದಿತರುಗಳ ವಿರುದ್ಧದ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) ರನ್ವಯ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ನಿರ್ಧರಿಸಲಾಗಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 94ಇಎನ್‌ಕ್ಯೂ 2019 ಬೆಂಗಳೂರು, ದಿನಾಂಕ:30.12.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿ / ನೌಕರರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 11 ಮತ್ತು 11(ಎ)ರಂತೆ ನಡೆಸಲು ಪ್ರಕರಣವನ್ನು ಸದರಿ ನಿಯಮಗಳ 14(ಎ)ರ ಅನುಸಾರ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ:-

1) ಶ್ರೀ ಇಜಾಜ್ ಅಹಮ್ಮದ ಸಿದ್ದೀಕ್, ಸ.ಕಾ.ಇಂ. ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಮೈಸೂರು
2) ಶ್ರೀ ಕೆ.ಜಿ. ಮಹದೇವ ನಾಯಕ್, ಪಂಚಾಯತ ಅಭಿವೃದ್ಧಿ ಅಧಿಕಾರಿ, ಕೂರ್ಗಳ್ಳಿ ಗ್ರಾಮ ಪಂಚಾಯತ್

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

30/12/2019

(ಎಸ್.ರಂಗನಗೌಡ)
**ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

ಇವರಿಗೆ :-

1. ಮಹಾಲೇಖಪಾಲರು, (ಲೆಕ್ಕಪತ್ರ ಅ & ಇ) ಕರ್ನಾಟಕ, ಬೆಂಗಳೂರು

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಮೂಲ ದಾಖಲೆಗಳನ್ನು ಇದರೊಂದಿಗೆ ಲಗಿತ್ತಿಸಿದೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ /
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು
7. ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ
8. ಸಂಬಂಧಪಟ್ಟ ಅಧಿಕಾರಿ / ನೌಕರರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ರವರ ಮುಖಾಂತರ

ಪ್ರತಿಯನ್ನು :-

9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ
10. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ
11. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟಿನಲ್ಲಿ ಪ್ರಕಟಿಸಲು
12. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

*****